ನನ್ನೂರೆ–ನಿನ್ನೂರು ತುಮ್ಮಿದಾ
ನಿನ್ನೂರೆ–ನನ್ನೂರು ತುಮ್ಮಿದಾ...

ಅಜ್ಜಿ ಹಾಡುತ್ತಿದ್ದರೆ ಹಾಡುಗಾರನಲ್ಲದ ಅಜ್ಜ ಮುಸಿಮುಸಿ ನಗುತ್ತಾ, 'ಜೈ ನಿರಂಜನ ದೇವ... ಸುಡುಗಾಡು ಸಿದ್ಧ...' ಎಂದು ಪುಟಗೋಸಿ ಕಟ್ಟಿಕೊಳ್ಳುತ್ತಿದ್ದ. ಅಜ್ಜಿ ನಿಂತುಕೊಂಡು ಉಚ್ಚೆ ಮಾಡುತ್ತಿದ್ದರೆ, 'ಏ, ಬಾಲನಾಗು, ಕೆಳಗೆ ಕುಂತುಕೊಂಡು ಮಾಡು' ಎಂದರೆ, ಅಜ್ಜಿ, 'ನೀ ಈಬೂತಿ ಮೋಟುಮೊಗ್ಗು ಸುಮ್ಕಿರು' ಎಂದು ಗೊಣಗುತ್ತಾ ಕಾಲುದಾರಿಯಲ್ಲಿ ನಡೆಯುತ್ತಿದ್ದಳು. ಅಜ್ಜ ಮತ್ತೆ ಕೈ ಹಿಡಿದು ಮೆಲ್ಲಗೆ ನಡೆಸಿಕೊಂಡು ಗೂಡ್ಲಿಗೆ ಸೇರಿಕೊಳ್ಳುತ್ತಿದ್ದ.

ಹಿಂಗ ಹತ್ತಾರು ವರ್ಸ ನಡೆದೋಯಿತು. ಅಜ್ಜಿ ಮೂರು ಹೆಣ್ಣುಮಕ್ಕಳನ್ನು ಹೆತ್ತಳು. ನಾಲ್ಕು ಸಲ ಬಸಿರು ಕಳೆದುಹೋಯಿತು. ದೊಡ್ಡ ಮಗಳು ಜೋನಂಗಿ ಅಣ್ಣೆಮ್ಮ, ನಂತರದವಳು ನನ್ನ ತಾಯಿ ನಡುಪು ಎಂಕಟಮ್ಮ, ಮೂರನೆಯವಳು ಚಿಕ್ಕೆಂಟಮ್ಮ. ಮಕ್ಕಳನ್ನು ಟೆಂಟುಗಳ ಹತ್ತಿರ ಬಿಟ್ಟು ಜೊತೆಗೆ ಕುಲದ ನಾಲ್ಕು ಸಂಸಾರಗಳು ಇರುತ್ತಿದ್ದರಿಂದ ಜೊತೆಗೆ ನಾಯಿಗಳು ಇರುತ್ತಿದ್ದರಿಂದ ಹಿರಿಯರು ಊರು ಸುತ್ತಿ ಮಧ್ಯಾಹ್ನದೊತ್ತಿಗೆ ಮರಳುತ್ತಿದ್ದರು.

ಒಂದು ಸಲ ಅಜ್ಜಅಜ್ಜಿ ಬೇರಿಕಿ ಪ್ಯಾಟೆಯತ್ತಿರ ಕುಂಟೆಯ ಬಳಿ ಕುಂತು ಹಿಟ್ಟು ಉಣ್ಣುತ್ತಿದ್ದರೆ ಪೊಲೀಸಿನವನೊಬ್ಬ, 'ಏ, ನೀ ಯಾರ, ಯಾವೂರ ನಡೀರಿ ಟೇಷನ್ನಿಗ. ನೆನ್ನೆ ಕಳ್ಳತನ ಆಗಯ್ತೆ' ಎಂದಾಗ ಮೊದಲೇ ಪೊಲೀಸರೆಂದರೆ ಹೆದರುತ್ತಿದ್ದ ಅಜ್ಜ, 'ನಾವು ಪರದೇಸಿ ಮಕ್ಳು ಸಾಮಿ, ನಮ್ಮ ಕತ್ತ ಕೊಯ್ದರೂ ಕಳ್ಳತನ ಮಾಡಲ್ಲಾ. ಇಕಾ ನಾವು ಸಿವನ ಮಕ್ಳು ಸಿವಾ, ಈ ಊರು, ಮನಿ, ಹೊಲಾ, ನೆಲ ನಮ್ಗ ಬ್ಯಾಡ ಸಿವಾ, ಹಿಂಗ ದ್ಯಾಸ ಸುತ್ಕೊಂಡು ಬದಕ್ತೀವಿ ಸಿವಾ' ಎಂದಾಗ, 'ನೆನ್ನಿ ಕಳ್ಳತನ ಆಗಯ್ತೆ, ನಡೀರಿ ಟೇಷನ್ನತ್ರ ಸೂಳೆಮಕ್ಕಳಾ...' ಎಂದಾಗ ಪಾತಾಳಕ್ಕಿಳಿದು ಹೋದ ಅಜ್ಜ ಉಚ್ಚೆ ಹೊಯ್ಕೊಂಡಿದ್ದ. 'ನಾವು ಜಂಗಮಾ ಕುಲದ ಜಂಗಾಲೋರು, ಕೊಟ್ರೆ ಕೈಯೊಡ್ತೀವಿ, ಕೇಳ್ಕೆ ಮಾಡ್ತೀವಿ, ಬುರ್ರಕತೆ ಹೇಳ್ತೀವಿ, ಹಗಲ ಯಾಸ ಮಾಡ್ತೀವಿ, ಆದ ಬಿಟ್ಟು ಕಳ್ಳತನ ಅಂಬೋದು ಗೊತ್ತಿಲ್ಲಾ ಬುದ್ಧಿ' ಎಂದು ಅಂಗಲಾಚಿದಾಗ ರೋಸಿಹೋದ ಅಜ್ಜಿ ನಾರಕ್ಕ, 'ಅಯ್ ಹಂಗ್ಯಾಕ ಅಳ್ತಿ, ನಡಿಯೋ ಈ ಕಲಪ್ಪ ಪುಚ್ಚಗ, ನಿಮ್ಮ ದೊಡ್ಡ ಸಾಮಿ ಹತ್ರ ನಮ್ಮತ್ರ ಏನಯ್ತೆ ನಿನ್ನ ಕತ್ತಾಳಿ ನಾರು' ಎಂದು ಸೆರಗಿನೊಳಗಿದ್ದ ಭಿಕ್ಷಾನ್ನವನ್ನು ನೀರಿಗೆ ಸುರಿದು ಟೇಶನ್ನಿನ ಬಾಗಿಲಿನಿಂದ, 'ನೋಡು ದ್ಯಾವ್ರೆ ದೊಡ್ಡ ಸಾಯಾಬಪ್ಪ, ನಾವು ಬುರ್ರಕತೆ ಹಾಡೋ ಬಯಲ ಮಕ್ಳು, ಈ ನಮ್ಮಪ್ಪ ಮಾದೇಸ, ನೀವು ಕಳ್ರು ಬರ್ರಿಅಂತ ಕರ್ಕೊಂಡು ಬಂದವ್ನೆ' ಎಂದು ಹೇಳಿದಾಗ ದೊಡ್ಡ ಸಾಹೇಬ, 'ಲೇ, ಹೋಗಿ ಹೋಗಿ ಎಂತಾವರ್ನ ಕರ್ಕೊಂಡು ಬಂದೀಯಾ, ನೀ ನಡಿಯಮ್ಮಾ ನಡಿ, ಹಾಂ, ಒಂದು ಹಾಡು ಅಂಗನ್ನು' ಎಂದು ಹೇಳಿದ ಕೂಡಲೇ ಅಜ್ಜಿ,

ಸಕಲ ದುರಿತ ನಿವಾರಣ
ಕೈವಾರ ಭೀಮಲಿಂಗ,
ಗರುಡಗಮನ, ಏಕಚಕ್ರಪುರ ರಮಣ...

ಎಂದು ಮರೆತು ಹಾಡುತ್ತಿದ್ದರೆ ಟೇಶನ್ನಿನ ಹತ್ತಿರ ಜನ ಸೇರುತ್ತಿದ್ದುದ್ದನ್ನು ನೋಡಿದ ಸಾಹೇಬ, 'ಸಾಕು ಬಿಡೇ ತಾಯಿ, ಇಕ' ಎಂದು ರುಪಾಯಿ ನೋಟು ಕೊಟ್ಟು, 'ಎಲ್ಲಿ ನಿನ್ನ ಗಂಡ' ಎಂದಾಗ, 'ಕುಂಟಿ ಹತ್ರ ಕುಂತ್ಕಂಡಯ್ತೆ ಸಾಮಿ' ಎಂದು ಕರೆದುಕೊಂಡು ಬಂದ ಪೊಲೀಸಿನವನನ್ನು ಒಂದು ಸಲ ನೋಡಿ ಬುಡ್ಗವನ್ನು ಬಗಲಿಗೆ ಹೇರಿಸಿಕೊಂಡು ಬಿರಬಿರನೆ ನಡೆಯುವಾಗ ಟೇಶನ್ನಿನ